CCE-II-RR/PR/PF/NSR/NSPR(A)/888/4048

**A**

# ಜೂನ್ 2024 ರ ಪರೀಕ್ಷೆ - 2
# JUNE 2024 EXAMINATION - 2

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 25 ]
Total No. of Questions : 25 ]

**CCE RR/PR/PF/ NSR/NSPR**
**FULL SYLLABUS**

Question Paper Serial No.

**ಸಂಕೇತ ಸಂಖ್ಯೆ : 29-K**
**Code No. : 29-K**

## ವಿಷಯ : ಕರ್ನಾಟಕ ಸಂಗೀತ — ಶಾಸ್ತ್ರ ವಿಭಾಗ
## Subject : CARNATIC MUSIC — THEORY

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**
**(Regular Repeater / Private Repeater / Private Fresh / NSR / NSPR)**

ದಿನಾಂಕ : 20. 06. 2024 ] [ Date : 20. 06. 2024
ಸಮಯ : ಮಧ್ಯಾಹ್ನ 2-00 ರಿಂದ ಸಂಜೆ 3-45 ರವರೆಗೆ ] [ Time : 2-00 P.M. to 3-45 P.M.
ಗರಿಷ್ಠ ಅಂಕಗಳು : 40 ] [ Max. Marks : 40

**20. 06. 2024**

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

ಇಲ್ಲಿಂದ ಕತ್ತರಿಸಿ

Tear here

**Cut here/ಇಲ್ಲಿ ಕತ್ತರಿಸಿ**

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 25 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : 8 × 1 = 8**

1. ಸಂಗೀತದ ಮೂಲ

   (A) ಋಗ್ವೇದ

   (B) ಯಜುರ್ವೇದ

   (C) ಸಾಮವೇದ

   (D) ಅಥರ್ವಣವೇದ

2. ‘U’ ಚಿಹ್ನೆಯ ತಾಳಾಂಗ

   (A) ಲಘು

   (B) ದ್ರುತ

   (C) ಅನುದ್ರುತ

   (D) ಪ್ಲುತ

3. ಮೋಹನರಾಗದ ಜನಕರಾಗ

(A) ಶಂಕರಾಭರಣ

(B) ಕಲ್ಯಾಣಿ

(C) ಮಾಯಾಮಾಳವಗೌಳ

(D) ಹರಿಕಾಂಭೋಜಿ

4. ಮುತ್ತುಸ್ವಾಮಿ ದೀಕ್ಷಿತರ ಅಂಕಿತ

(A) ಶ್ಯಾಮಕೃಷ್ಣ

(B) ಆದಿಕೇಶವ

(C) ಗುರುಗುಹ

(D) ತ್ಯಾಗರಾಜ

5. ಈ ಕೆಳಗಿನವುಗಳಲ್ಲಿ ಸುಷಿರವಾದ್ಯ

(A) ವೀಣೆ

(B) ಮೃದಂಗ

(C) ಕೊಳಲು

(D) ಘಟ

6. ಬಿಲಹರಿ ರಾಗವು ಭಾಷಾಂಗರಾಗವಾಗಿದೆ. ಕಾರಣ, ಈ ರಾಗವು,

(A) ಅನ್ಯಸ್ವರವನ್ನು ಹೊಂದಿದೆ

(B) ವಕ್ರಸಂಚಾರ ಹೊಂದಿದೆ

(C) ಜನಕರಾಗದ ಸ್ವರಗಳನ್ನೇ ಹೊಂದಿದೆ

(D) ಒಂದು ಜನ್ಯರಾಗ

7. ಕರ್ನಾಟಕ ಸಂಗೀತ ಪದ್ಧತಿಯ ಒಂದು ಸ್ಥಾಯಿಯಲ್ಲಿ ಬರುವ ಸ್ವರಗಳ ಸಂಖ್ಯೆ

(A) 12

(B) 10

(C) 16

(D) 14

8. ತಂಬೂರಿಯು ಒಂದು ಶ್ರುತಿವಾದ್ಯ. ಏಕೆಂದರೆ, ಈ ವಾದ್ಯವು

(A) ಒಂದು ಬುರುಡೆಯನ್ನು ಹೊಂದಿದೆ

(B) ಪ್ರಕೃತಿ ಸ್ವರಗಳನ್ನು ನುಡಿಯುತ್ತದೆ

(C) ಸಪ್ತಸ್ವರಗಳನ್ನು ನುಡಿಯುತ್ತದೆ

(D) ತಾಳವನ್ನು ನುಡಿಯುತ್ತದೆ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : 8 × 1 = 8**

9. ಕರ್ನಾಟಕ ಮತ್ತು ಹಿಂದೂಸ್ಥಾನಿ ಸಂಗೀತ ಪದ್ಧತಿಗಳಲ್ಲಿನ ಒಂದು ಸಾಮ್ಯತೆಯನ್ನು ತಿಳಿಸಿ.

10. ಸ್ವರ ಎಂದರೇನು ?

11. ಪ್ರಥಮ ಕಾಲಕ್ಕೂ ಹಾಗೂ ದ್ವಿತೀಯ ಕಾಲಕ್ಕೂ ಇರುವ ಒಂದು ವ್ಯತ್ಯಾಸವನ್ನು ತಿಳಿಸಿ.

12. ಪ್ರಕೃತಿ ಸ್ವರ ಮತ್ತು ವಿಕೃತಿ ಸ್ವರಗಳ ನಡುವಿನ ಒಂದು ವ್ಯತ್ಯಾಸವನ್ನು ತಿಳಿಸಿ.

13. ಸಂಚಾರಿಗೀತೆಗೂ, ಲಕ್ಷಣಗೀತೆಗೂ ಇರುವ ಒಂದು ವ್ಯತ್ಯಾಸವನ್ನು ಬರೆಯಿರಿ.

14. ವಕ್ರರಾಗ ಎಂದರೇನು ?

15. ತತವಾದ್ಯಕ್ಕೂ ಸುಷಿರವಾದ್ಯಕ್ಕೂ ಇರುವ ಒಂದು ವ್ಯತ್ಯಾಸವನ್ನು ಬರೆಯಿರಿ.

16. ಔಡವರಾಗ ಹಾಗೂ ಷಾಡವರಾಗಗಳಿಗಿರುವ ಒಂದು ವ್ಯತ್ಯಾಸವನ್ನು ತಿಳಿಸಿ.

**III. ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ : 7 × 2 = 14**

17. ಸಂಗೀತ ಕಲಿಕೆಯ ಮಹತ್ವವನ್ನು ಎರಡು ವಾಕ್ಯಗಳಲ್ಲಿ ವಿವರಿಸಿ.

18. ಮಾರ್ಗಸಂಗೀತವು ದೇಶಿ ಸಂಗೀತಕ್ಕಿಂತ ಹೇಗೆ ಭಿನ್ನವಾಗಿದೆ ?

19. ಅತೀತಗ್ರಹ ಮತ್ತು ಅನಾಗತಗ್ರಹಕ್ಕಿರುವ ಒಂದು ವ್ಯತ್ಯಾಸವನ್ನು ಬರೆಯಿರಿ.

20. ಈ ಕೆಳಗಿನ ವಾದ್ಯಗಳನ್ನು ತತ, ಸುಷಿರವಾದ್ಯಗಳಾಗಿ ವಿಂಗಡಿಸಿ ಬರೆಯಿರಿ :

ವೀಣೆ, ಕೊಳಲು, ಸಿತಾರ್, ಮ್ಯಾಂಡಲಿನ್, ನಾಗಸ್ವರ, ಕ್ಲಾರಿಯೋನೆಟ್, ಪಿಟೀಲು, ಸಾಕ್ಸೋಫೋನ್.

21 ಕರ್ನಾಟಕ ಮತ್ತು ಹಿಂದೂಸ್ಥಾನಿ ಸಂಗೀತ ಪದ್ಧತಿಗಳಿಗಿರುವ ಎರಡು ವ್ಯತ್ಯಾಸಗಳನ್ನು ತಿಳಿಸಿ.

22. ಪುರಂದರದಾಸರನ್ನು 'ಕರ್ನಾಟಕ ಸಂಗೀತ ಪಿತಾಮಹ'ರೆಂದು ಕರೆಯಲು ಕಾರಣವೇನು ?

23. ಈ ಕೆಳಗಿನ ಔಡವ ಮತ್ತು ಸಂಪೂರ್ಣ ರಾಗಗಳನ್ನು ವಿಂಗಡಿಸಿ ಬರೆಯಿರಿ :

ಹಂಸಧ್ವನಿ, ಮಾಯಾಮಾಳವಗೌಳ, ಮೋಹನ, ಖರಹರಪ್ರಿಯ.

**IV. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

24. ಚತುರಶ್ರಜಾತಿ ಮಠ್ಯತಾಳದ ಅಲಂಕಾರವನ್ನು ಸ್ವರ ಮತ್ತು ತಾಳಲಿಪಿಯೊಂದಿಗೆ ವಿನ್ಯಾಸಗೊಳಿಸಿ ಬರೆಯಿರಿ. **4**

25. ಶ್ಯಾಮಾಶಾಸ್ತ್ರಿಗಳ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ವಿವರಿಸಿ. **6**

DO NOT WRITE ANYTHING HERE